
ಮೇವಾಡ ರಾಜರ ಲಾಂಛನ







ಮೋತಿ ಮಾಗ್ರಿ: ಇದೊಂದು ಚಿಕ್ಕ ಬೆಟ್ಟ. ತುದಿಯಲ್ಲಿ ರಜಪೂತ ದೊರೆ 'ಮಹಾರಾಣಾ ಪ್ರತಾಪ' ಮತ್ತು ಅವನ ಕುದುರೆ 'ಚೇತಕ್'ನ ಕಂಚಿನ ಪ್ರತಿಮೆಯಿದೆ. ಬೆಟ್ಟದ ಮೇಲಿನಿಂದ ಫತೇಹ ಸಾಗರ ಸರೋವರವದ ಸುಂದರ ದೃಶ್ಯವನ್ನು ನೋಡಬಹುದು. ಇಲ್ಲಿಂದ ಉದಯಪುರ ಸಿಟಿ ನೋಡುವುದೇ ಚೆಂದ.

ಹಳದಿ ಘಾಟ್: ಇದು ಅರವಾಳಿ ಪರ್ವತ ಶ್ರೇಣಿಯಲ್ಲಿರುವ ಕಣಿವೆ ಪ್ರದೇಶ. ಉದಯಪುರದಿಂದ 40 ಕಿಮೀ ದೂರದಲ್ಲಿದೆ. ಇಲ್ಲಿನ ಮಣ್ಣು ಮಾಸಲು ಹಳದಿ ಬಣ್ಣದ್ದಾಗಿರುವುದರಿಂದ ಈ ಜಾಗಕ್ಕೆ ಹಳದಿ ಘಾಟ್ ಎಂಬ ಹೆಸರು ಬಂತು.1576ರಲ್ಲಿ ಮಹಾರಾಣಾ ಪ್ರತಾಪ ಮತ್ತು ಮೊಘಲ್ ಸೈನಿಕರ ಭೀಕರ ಯುದ್ಧ ನಡೆದ ಜಾಗವಿದು. ಯುದ್ಧದಲ್ಲಿ ರಾಣಾ ಪ್ರತಾಪ ಹಿನ್ನಡೆ ಸಾಧಿಸಿದರೂ ಮಹಾರಾಣಾ ಪ್ರತಾಪನ ಪೌರುಷ ಮತ್ತು ಅವನ ಕುದುರೆ ಚೇತಕ್‌ನ ಸ್ವಾಮಿಭಕ್ತಿ ಜನಮಾನಸದಲ್ಲಿ ಉಳಿದಿದೆ.

ಯುದ್ಧದಲ್ಲಿ ಗಾಯಾಳುವಾದರೂ ಸುಮಾರು ಐದು ಮೈಲಿ ಮಹಾರಾಣಾ ಪ್ರತಾಪನನ್ನು ಹೊತ್ತು, ತೊರೆ ಹಾರಿ ತನ್ನ ದೊರೆಯನ್ನು ಸುರಕ್ಷಿತ ಸ್ಥಳಕ್ಕೆ ತಲುಪಿಸಿ ಪ್ರಾಣ ಬಿಟ್ಟ ಕುದುರೆ 'ಚೇತಕ್' ಇಲ್ಲಿ ಹೀರೊ. ಚೇತಕ್ ಪ್ರಾಣ ಬಿಟ್ಟ ಜಾಗದಲ್ಲಿ ಒಂದು ಸ್ಮಾರಕವಿದೆ.

ಮಹಾರಾಣಾ ಪ್ರತಾಪ ಮ್ಯೂಸಿಯಂ: ಇದು ಉದಯಪುರದಿಂದ 30ಕಿಮೀ ದೂರದಲ್ಲಿದೆ. ಮ್ಯೂಸಿಯಂನ ಹೊರಗೆ ಆಕರ್ಷಕವಾದ ಮಹಾರಾಣಾ ಪ್ರತಾಪನ ಆನೆ, ಕುದುರೆಗಳ ಕಂಚಿನ ಮೂರ್ತಿಗಳಿವೆ. ಮ್ಯೂಸಿಯಂನ ಒಳಗೆ ಮಹಾರಾಣಾ ಪ್ರತಾಪನ ಜೀವನ ಚರಿತ್ರೆಯನ್ನು ತೋರಿಸುವ ಸಾಕ್ಷ್ಯ ಚಿತ್ರ, ವರ್ಣಚಿತ್ರಗಳು ಮತ್ತು ಅವನ ಜೀವನದಲ್ಲಿ ನಡೆದ ಹಲವು ಘಟನೆಗಳನ್ನು ತೋರಿಸುವ ಆಳೆತ್ತರದ ಮೂರ್ತಿಗಳಿವೆ. ಮ್ಯೂಸಿಯಂ ಕಟ್ಟಿದ ರೀತಿ, ನಿರ್ವಹಣೆ ಗಮನಿಸಿದರೆ ಮ್ಯೂಸಿಯಂ ಅಂದರೆ ಹೀಗಿರಬೇಕು ಎನ್ನುವಂತಿದೆ.

ಉದಯಪುರ ಸಂದರ್ಶಿಸಲು ಅಕ್ಟೋಬರ್‌ನಿಂದ ಡಿಸೆಂಬರ್, ಫೆಬ್ರುವರಿ ಮತ್ತು ಮಾರ್ಚ್ ಸೂಕ್ತ ಸಮಯ. ಜನವರಿ ಅತಿ ಚಳಿ, ಗಾಳಿಯಿಂದ ಕೂಡಿದ್ದರೆ, ಮಾರ್ಚ್ ಮಧ್ಯಭಾಗದಿಂದ ಆಗಸ್ಟ್ ಅಂತ್ಯದವರೆಗೆ ಸೆಖೆ, ಬಿಸಿಗಾಳಿ ಮತ್ತು ಒಣ ಹವೆಯಿರುತ್ತದೆ. ಪ್ರವಾಸದಲ್ಲಿದ್ದಾಗ ಸ್ಥಳೀಯ ಆಹಾರವೈವಿಧ್ಯ ದಾಲ್ ಭಾಟಿ ಚುರ್ಮ, ಘಟ್ಟೆ ಕೀ ಸಬ್ಜಿ, ಬಾಜ್ರೆ ಕೀ ರೋಟಿ, ಗೇವರ್ ಸವಿಯಲು ಮರೆಯದಿರಿ.